2. ಪ್ರಕಟಣೆ :

ಅಧ್ಯಕ್ಷರು : ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಯವರಿಂದ ಬಂದಿರುವ ಸಂದೇಶದಲ್ಲಿ ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯ ವಿಧಾನ ಹಾಗೂ ನಡವಳಿಕೆ ನಿಯಮ 118ರ ಮೇರೆಗೆ ವಿಧಾನ ಪರಿಷತ್ತು ದಿನಾಂಕ: 12.12.2012ರಂದು ಈ ಕೆಳಗಿನ ವಿಧೇಯಕಗಳನ್ನು ಯಾವುದೇ ತಿದ್ದುಪಡಿ ಇಲ್ಲದೇ ಅಂಗೀಕರಿಸಲಾಗಿದೆಯೆಂದು ತಿಳಿಸಿರುತ್ತಾರೆ.

1. ಕರ್ನಾಟಕ ವಿಧಾನಮಂಡಲದವರ ವೇತನ, ನಿವೃತ್ತಿ ವೇತನ, ನಿವೃತ್ತಿ ವೇತನಗಳು ಮತ್ತು ಭತ್ಯೆಗಳು (ಎರಡನೇ ತಿದ್ದುಪಡಿ) ವಿಧೇಯಕ, 2012.
2. ಕರ್ನಾಟಕ ವಿಧಾನಮಂಡಲದವರ ವೇತನಗಳು, ನಿವೃತ್ತಿ ವೇತನಗಳು ಮತ್ತು ಭತ್ಯೆಗಳ (ಮೂರನೇ ತಿದ್ದುಪಡಿ) ವಿಧೇಯಕ, 2012
3. ಕರ್ನಾಟಕ ಲಿಫ್ಟ್‌ಗಳ ಎಸ್ಕಲೇಟರ್‌ಗಳ ಮತ್ತು ಪ್ಯಾಸೆಂಜರ್ ಕನ್ವೇಯರ್‌ಗಳ ವಿಧೇಯಕ 2012

3. ಕೃಷ್ಣಾ ಯೋಜನೆಯ ಬಗ್ಗೆ ಚರ್ಚೆಗೆ ತೆಗೆದುಕೊಳ್ಳಲು ಸದನವನ್ನು ಒಂದು ದಿವಸ ಮುಂದುವರೆಸುವ ಬಗ್ಗೆ ಮನವಿ :

ಶ್ರೀ ಸಿದ್ಧರಾಮಯ್ಯ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಇವತ್ತು ಗುರುವಾರ, ಸದನ ನಡೆಯುವ ಕೊನೆಯ ದಿವಸವಾಗಿರುವುದರಿಂದ ಎಲ್ಲರೂ ಹೊರಡುವ ಮೂಡ್‌ನಲ್ಲಿರುತ್ತಾರೆ. ತಾವು ಅಧಿವೇಶನವನ್ನು ಇನ್ನು ಒಂದು ದಿವಸ extend ಮಾಡಿದರೆ ಬಹಳ ಅನುಕೂಲವಾಗುತ್ತದೆ. ಏಕೆಂದರೆ, ಅನೇಕ ಬಿಲ್‌ಗಳು ಇವೆ. ಎರಡನೆಯದಾಗಿ, ತಾವು ನಿಯಮ 69ಕ್ಕೆ convert ಮಾಡಿರುವಂಥ ವಿಷಯಗಳು ಸಹ complete ಆಗಿಲ್ಲ. ಇವತ್ತು ಒಂದೇ ದಿವಸದಲ್ಲಿ 52 Calling Attentionಗಳು ಇವೆ ಉತ್ತರ ಭಾಗದಲ್ಲಿ ಕೃಷ್ಣಾ ಬಗ್ಗೆ ನಾವು ಚರ್ಚೆ ಮಾಡಿ ಇದು ಅಪೂರ್ಣವಾಗಿದ್ದು, ಇದಕ್ಕೆ ಉತ್ತರವನ್ನು